B.M.T.C. ಪ್ರಯಾಣಿಕರ ಕುಂದುಕೊರತೆ

120 (65) ಶ್ರೀ ರವಿ ಸುಬ್ರಹ್ಮಣ್ಯ ಎಲ್.ಎ. (ಬಸವನ ಗುಡಿ) : ಮಾನ್ಯ ಉಪ ಮುಖ್ಯಮಂತ್ರಿಗಳು, ಗೃಹ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಬಿ.ಎಂ.ಟಿ.ಸಿ. ಬಸ್‌ಗಳಲ್ಲಿ ಕೆಲವು ನಿರ್ವಾಹಕರು ನಿಗದಿತ ಸ್ಟೇಜ್‌ನ ದರಕ್ಕಿಂತ ಹೆಚ್ಚಿನ ದರದ ಟಿಕೇಟನ್ನು ನೀಡುತ್ತಿದ್ದು, ಇದರಿಂದ ಪ್ರಯಾಣಿಕರಿಗೆ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇಂತಹ ನಿರ್ವಾಹಕರ ವಿರುದ್ಧ ಯಾವ ಶಿಸ್ತಿನ ಕ್ರಮಗಳನ್ನು ಕೈಗೊಳ್ಳಲಾಗಿದೆ; ಹಾಗಿದ್ದಲ್ಲಿ, ಇಂತಹ ಪ್ರಕರಣಗಳನ್ನು ತಡೆಗಟ್ಟಲು ಯಾವ ಕ್ರಮಗಳು ಜಾರಿಯಲ್ಲಿವೆ;

ಇ) ರಾತ್ರಿ ಪಾಳಿಯ ಬಿ.ಎಂ.ಟಿ.ಸಿ. ಬಸ್‌ಗಳಲ್ಲಿ ಪ್ರಯಾಣಿಕರಿಗೆ ಟಿಕೆಟ್ ನೀಡದೆ ಹಾಗೂ ಒಮ್ಮೆ ನೀಡಿದ ಟಿಕೇಟನ್ನು ಹಿಂಪಡೆದು ಮರುಬಳಕೆ ಮಾಡುತ್ತಿರುವುದರಿಂದ ಸರಕಾರದ ಬೊಕ್ಕಸಕ್ಕೆ ನಷ್ಟವನ್ನುಂಟು ಮಾಡುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇಂತಹ ನಿರ್ವಾಹಕರ ವಿರುದ್ಧ ಸರಕಾರವು ಯಾವ ಶಿಸ್ತು ಕ್ರಮಗಳನ್ನು ಜರುಗಿಸಲಾಗಿದೆ;

ಈ) ಪ್ರಯಾಣಿಕರಿಗೆ ಚಾಲಕ ಹಾಗೂ ನಿರ್ವಾಹಕರುಗಳಿಂದ ಅನಾನುಕೂಲವಾಗುವಂತಹ ಪ್ರಸಂಗಗಳು ಹೆಚ್ಚುತ್ತಿದ್ದು, ಚಾಲಕ ಹಾಗೂ ನಿರ್ವಾಹಕರ ಹೆಸರು ಹಾಗೂ ಅವರ ನಿಯಂತ್ರಣಾಧಿಕಾರಿಗಳ ಮೊಬೈಲ್ ಸಂಖ್ಯೆ ಹಾಗೂ ಬಸ್ ಯಾವ ಡಿಪೋ ಸೇರಿದ್ದು. ಈ ಮಾಹಿತಿಯನ್ನು ಕನ್ನಡ ಹಾಗೂ ಇಂಗ್ಲೀಷ್‌ನಲ್ಲಿ ಬಸ್‌ನ ಒಳಭಾಗದಲ್ಲಿ display ಮಾಡಬಾರದೇಕೆ; ಇದರಿಂದ ಪ್ರಯಾಣಿಕರ ಕುಂದುಕೊರತೆಗಳನ್ನು ನಿವಾರಿಸಲು ಅಧಿಕಾರಿಗಳು ತ್ವರಿತವಾಗಿ ಸ್ಪಂದಿಸಬಹುದು.

ಉ) ಕುಂದುಕೊರತೆಗಳ ಕುರಿತು ಸಾರಥಿ ವಾಹನಕ್ಕೆ ಕರೆ ಮಾಡಿದಾಗ ಪರಿಶೀಲಿಸುವ ಭರವಸೆ ನೀಡುವ ಅಧಿಕಾರಿಗಳು ಯಾವುದೇ

ರೀತಿಯ feedback ಅನ್ನು ದೂರುದಾರನಿಗೆ ನೀಡುತ್ತಿಲ್ಲ; ಇಂತಹ ಕ್ರಮ ಸರಿಯೇ;

ಊ) ಪ್ರಯಾಣಿಕರ ದಟ್ಟಣೆಯನ್ನು ನಿಯಂತ್ರಿಸಲು ತ್ಯಾಗರಾಜ ನಗರದಿಂದ ಮೆಜೆಸ್ಟಿಕ್‌ಗೆ via Sajjan Rao Circle & J C ರೋಡ್ ಮೂಲಕ ಯಾವುದೇ ಬಸ್ ಸೌಲಭ್ಯವಿಲ್ಲದಿರುವುದು ಸರಕಾರದ ಗಮನಕ್ಕೆ ಬಂದಿದೆಯೆ; ಹಾಗಿದ್ದಲ್ಲಿ, ಯಾವುದಾದರೂ ಹೊಸ ಮಾರ್ಗವನ್ನು ಜಾರಿಗೆ ತರಲಾಗುವುದೇ?

ಶ್ರೀ ಆರ್. ಅಶೋಕ (ಮಾನ್ಯ ಉಪ ಮುಖ್ಯಮಂತ್ರಿಗಳು, ಗೃಹ ಮತ್ತು ಸಾರಿಗೆ ಸಚಿವರು):

ಅ) ಹೌದು.

ಆ) ಇಂತಹ ಪ್ರಕರಣಗಳಲ್ಲಿ ದೂರು ಸ್ವೀಕರಿಸಿದಾಗ ಪರಿಶೀಲಿಸಿ ನಿರ್ವಾಹಕರು ತಪ್ಪಿತಸ್ಥರಾಗಿದ್ದಲ್ಲಿ ನಿಯಮಾನುಸಾರ ಶಿಸ್ತಿನ ಕ್ರಮ ಜರುಗಿಸ ಲಾಗುತ್ತಿದೆ.

ಇಂತಹ ಪ್ರಕರಣಗಳನ್ನು ತಡೆಗಟ್ಟಲು ಸಂಸ್ಥೆಯ ಎಲ್ಲಾ ಘಟಕ ಗಳಿಗೂ ಅಗತ್ಯ ಆದೇಶಗಳ ಮೂಲಕ ಹಂತವಾರು ದರ ನಿಗದಿಯ ದರ ಪಟ್ಟಿಯನ್ನು ಪ್ರತಿಯೊಬ್ಬ ಚಾಲನಾ ಸಿಬ್ಬಂದಿಯವರಿಗೂ ನೀಡುವಂತೆ ಸೂಚಿಸಲಾಗುತ್ತಿದೆ. ಅಲ್ಲದೇ ಮಾರ್ಗವಾರು ಹಂತಗಳ ತಿಳುವಳಿಕೆಯನ್ನು ನೀಡಲಾಗುತ್ತದೆ.

ಇ) ಹೌದು.

ಇಂತಹ ಪ್ರಕರಣಗಳ ತೀವ್ರತೆಯ ಆಧಾರದ ಮೇಲೆ ನಿರ್ವಾಹಕರ ವಿರುದ್ಧ ಸಂಸ್ಥೆಯ ನಿಯಮಾವಳಿಗಳಂತೆ ಶಿಸ್ತುಪಾಲನಾಧಿಕಾರಿಗಳು ಅಮಾನತ್ತು/ ಕೆಓಡಿ (Kept off duty)/ವಜಾ ಮಾಡುವುದು/ ವೇತನ ಬಡ್ತಿ ತಡೆ ಹಿಡಿಯುವುದು ಅಥವಾ ಮುಂದೂಡುವುದು/ ಮುಂತಾದ ದಂಡ ವಿಧಿಸುವ ಶಿಸ್ತಿನ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಈ) ಸಂಸ್ಥೆಯ ಚಾಲನಾ ಸಿಬ್ಬಂದಿಗಳು (ಚಾಲಕ/ಚಾಲಕ ಕಂ ನಿರ್ವಾಹಕರು/ ನಿರ್ವಾಹಕರು) ಸಮವಸ್ತ್ರದ ಮೇಲೆ ಕಡ್ಡಾಯವಾಗಿ ನಾಮಧೇಯ ಫಲಕಗಳನ್ನು (ಸಿಬ್ಬಂದಿಯ ಹೆಸರು, ಬಿಲ್ಲೆಸಂಖ್ಯೆ, ಘಟಕ ಸಂಖ್ಯೆ) ಪ್ರದರ್ಶಿಸಬೇಕೆಂದು ಆದೇಶ ಹೊರಡಿಸಲಾಗಿರುತ್ತದೆ.

ಪ್ರಯಾಣಿಕರು ತಮ್ಮ ಕುಂದುಕೊರತೆಗಳನ್ನು / ದೂರುಗಳನ್ನು ನೀಡಲು ಅನುಕೂಲವಾಗುವಂತೆ ಸಂಸ್ಥೆಯ ಕಾಲ್‌ಸೆಂಟರ್ ಟೋಲ್ ಫ್ರೀ ದೂರವಾಣಿ ಸಂಖ್ಯೆ 1800–425–1663ಯನ್ನು ಎಲ್ಲಾ ಬಸ್ಸುಗಳಲ್ಲಿ ಪ್ರದರ್ಶಿಸಲು ಕ್ರಮಕೈಗೊಳ್ಳಲಾಗಿರುತ್ತದೆ. ಈ ಮೂಲಕ ಪ್ರಯಾಣಿಕರ ಕುಂದು ಕೊರತೆಗಳನ್ನು ತ್ವರಿತಗತಿಯಲ್ಲಿ ನಿವಾರಿಸಲಾಗುತ್ತಿದೆ.

ಉ) ಕುಂದುಕೊರತೆಗಳ ಬಗ್ಗೆ ಸಾರಥಿ ವಾಹನಕ್ಕೆ ಅಥವಾ **"ಸಾರಥಿ ಶಾಖೆಗೆ"** ಬಂದಂತಹ ದೂರುಗಳನ್ನು ಕೂಡಲೇ ಪರಿಶೀಲಿಸಿ, ಕ್ರಮ ಕೈಗೊಂಡ ಬಗ್ಗೆ ಎಸ್‌ಎಂಎಸ್ /ಇ–ಮೇಲ್ ಮುಖಾಂತರ ಹಾಗೂ ಪತ್ರ ಮುಖೇನ ದೂರು ಸಲ್ಲಿಸುವವರಿಗೆ ಮಾಹಿತಿಯನ್ನು ನೀಡಲಾಗುತ್ತಿದೆ.

ಊ) ತ್ಯಾಗರಾಜನಗರದಿಂದ ಸಜ್ಜನರಾವ್‌ವೃತ್ತ ಹಾಗೂ ಜೆ.ಸಿ.ರಸ್ತೆಯ ಮೂಲಕ ಕೆಂಪೇಗೌಡ ಬಸ್ ನಿಲ್ದಾಣಕ್ಕೆ ಬಸ್ ಸೌಲಭ್ಯ ಕಲ್ಪಿಸುವಂತೆ ಇದುವರೆವಿಗೂ ಯಾವುದೇ ಕೋರಿಕೆ ಬಂದಿರುವುದಿಲ್ಲ. ಪ್ರಸ್ತುತ ತ್ಯಾಗರಾಜನಗರದಿಂದ ಕೆಂಪೇಗೌಡ ಬಸ್ ನಿಲ್ದಾಣಕ್ಕೆ ಮಾರ್ಗಸಂಖ್ಯೆ 31–ಇ, 210–ಎನ್, 210ಪಿ, ಕ್ಯೂ, ಡಬ್ಲ್ಯೂ, ಡಬ್ಲ್ಯೂಎ, ಎನ್‌ಎ, ಎನ್‌ಬಿ, ಮತ್ತು 374–ಜಿ ಗಳಲ್ಲಿ 33 ಅನುಸೂಚಿಗಳು ಆಚರಣೆಯಲ್ಲಿದ್ದು, ಸದರಿ ಅನುಸೂಚಿಗಳಲ್ಲಿ ರಾಮಕೃಷ್ಣ ಆಶ್ರಮದ ನಿಲುಗಡೆಯಲ್ಲಿ ಒಂದು ಬದಲಾವಣೆ ಮಾಡಿ ಮಾರ್ಗಸಂಖ್ಯೆ 36 ಹಾಗೂ 43 ಗಳಲ್ಲಿ ಸಜ್ಜನ್‌ರಾವ್‌ವೃತ್ತ, ಜೆ.ಸಿ.ರಸ್ತೆಯ ಮೂಲಕ ಪ್ರಯಾಣಿಸಬಹುದಾಗಿರುತ್ತದೆ.

ಬಸವ ವಸತಿ ಯೋಜನೆಯಡಿ ಸ್ವಂತ ನಿವೇಶನ ಇಲ್ಲದವರಿಗೆ ಮನೆ

714 (198) ಶ್ರೀ ಖಾದರ್ ಯು.ಟಿ. (ಮಂಗಳೂರು) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ರಾಜ್ಯದಲ್ಲಿ ಸ್ವಂತ ನಿವೇಶನ ಇಲ್ಲದೇ ಇರುವ ಫಲಾನುಭವಿಗಳಿಗೆ ಬಸವ ಹಾಗೂ ಇಂದಿರಾ ಆವಾಸ್ ಯೋಜನೆಯಡಿ ಸಾಗುವಳಿ